ಪದಾರ್ಥಗಳು ಮೇಲೆಕಂಡ ಪರಿಮಾಣದ ಮೇಲೆ ಇಪ್ಪತ್ತೈದ್ಕೇ ಆಗಬೇಕೆಂದು ಖಾತರಿ ಯಾವದೂ ದೊರೆಯುವದಿಲ್ಲ.

7. ಖೈದಿಗಳು ಬೀಸುವದಕ್ಕೆ ರಾಗಿಯನ್ನು ಕಂಟ್ರಾಕ್ಟರ್ ಸರಬರಾಯಿ ಮಾಡತಕ್ಕದ್ದು. ಅದನ್ನು ಹಸೀಹಿಟ್ಟುಗಿಯೇ ಕೊಡತಕ್ಕದ್ದು.

ಸರಬರಾಯಿ ಮಾಡಲ್ಪಡುವ ಹಸೀಹಿಟ್ಟಿನ ಪರಿಮಾಣವನ್ನು ನೋಡಿಕೊಂಡು ರಾಗೀ ದರದಂತೆಯೇ ಹಣ ಕೊಡಲ್ಪಡುವುದು.

8. ಕಮ್ಮಿ ದರಖಾಸ್ತನ್ನಾಗಲಿ ಅಥವ ಯಾವ ದರಖಾಸ್ತನ್ನೇ ಆಗಲಿ ಮಂಜೂರ್ಮಾಡಿಕೊಳ್ಳುವ ಭಾಗದಲ್ಲಿ ಸೂಪರ್ಟಿರ್ಡೆಂಟರವರು ಬದ್ಧರಾಗಿರುವುದಿಲ್ಲ. ಇವರು ಯಾವ ಕಾರಣವನ್ನೂ ಹೇಳದೆ ಯಾವ ದರಖಾಸ್ತನ್ನಾದರೂ ತಿರಸ್ಕರಿಸಬಹುದು.

9. ಯಾರ ದರಖಾಸ್ತನ್ನು ಮಂಜೂರ್ಮಾಡಿಕೊಳ್ಳುತ್ತಾರೆಯೋ ಅಂಥಾ ದರಖಾಸ್ತುದಾರರು ಹಾಜರ್ಮಾಡಿದ ಜೀವಣೀ ಮೊಬಲಗು ಇಟ್ಟುಕೊಳ್ಳಲ್ಪಡುವದು, ಮತ್ತು ಅವರ ದರಖಾಸ್ತು ಮಂಜೂರಾಗಿದೆಯೆಂದು ಅವರಿಗೆ ತಿಳಿಯು ಪಡಿಸಿದ ಬಂದು ವಾರದೊಳಗಾಗಿ ಅವರು ಕಂಟ್ರಾಕ್ಟು ಕರಾರನ್ನು ಬರೆದುಕೊಡದೇ ಹೋದರೂ ಸರಿಯೇ, ಅಥವ ಧಾನ್ಯಕ್ಕೆ 200 ರೂಪಾಯಿ, ಕಾರದ ಸಾಮಾನಿಗೆ 100 ರೂಪಾಯಿ, ಇತರ ಅವಶ್ಯಕವಾದ ಪದಾರ್ಥಗಳಿಗೆ 100 ರೂಪಾಯಿ, ಕುರೀ ಮಾಂಸಕ್ಕೆ 75 ರೂಪಾಯಿ, ಈ ಮೇರೆ ನಗದಾಗಿಯಾಗಲಿ, ಸರಕಾರೀ ಬಾಂಡುಗಳ ಮೂಲಕವಾಗಿಯಾಗಲಿ ಸೆಕ್ಯೂರಿಟಿಯನ್ನು ಕೊಡದೆ ಇದ್ದರೂ ಸರಿಯೆ, ಮೇಲೆ ಕಂಡ ಜೀವಣೀ ಮೊಬಲಗು ಸಿವಾಯಿ ಜಮೆಯಾಗಿ ತೆಗೆದು ಕೊಳ್ಳಲ್ಪಡುವದು.

10. ಕಂಟ್ರಾಕ್ಟರ್ ಯಾ ಇಜಾರೆದಾರರಿಗೆ ನಗದು ಹಣ ಮುಂಗಡವಾಗಿ ಪಾವತಿಯಾಗಲಾರದು. ಸಾಮಾನುಗಳನ್ನು ಸರಬರಾಯಿ ಮಾಡಿದ್ದಕ್ಕಾಗಿ ಹಣವನ್ನು ಸೂಪರ್ಟಿರ್ಡೆಂಟರವರು ಪ್ರತಿ ತಿಂಗಳ ಗುರ್ತೇ ತಾರೀಖಿನ ತರುವಾಯ ಪಾವತಿ ಮಾಡುವರು.

11. ಸ್ಟೋರ್ ರೂಂಸ್ ಎಂಬ ಉಗ್ರಾಣವು ಇಜಾರೆದಾರರ ವಶಕ್ಕೆ ಬಿಟ್ಟು ಕೊಡಲ್ಪಡುವುದು. ಅವರು ಅದರಲ್ಲಿ ನಾಶವಾಗದೆ ಇರತಕ್ಕ ಪದಾರ್ಥಗಳನ್ನ ಇಟ್ಟುಕೊಳ್ಳಬಹುದು. ಯಾವಾಗ್ಯೂ ಉಗ್ರಾಣದಲ್ಲಿ ಒಂದು ತಿಂಗಳ ಸಾಮಾನಿಗೆ ಕಡಮೆ ಇಲ್ಲದಂತೆ ತುಂಬಿಕೊಂಡಿರಬೇಕು. ನಾಶವಾಗತಕ್ಕ ಪದಾರ್ಥಗಳು ಎಂದರೆ ತರಕಾರಿ ವಗೈರೆ ಪದಾರ್ಥಗಳು ಪ್ರತಿ ದಿನವೂ ಬೆಳಗಿನ 7 ಘಂಟೆಗೆ ಜೈಲ್ಖಾನೆಯಲ್ಲಿರಬೇಕು.

12. ಈ ಕಂಟ್ರಾಕ್ಟನ್ನು ಪಿಕಮಿ ಇಜಾರೆಯಾಗಿ ಕೊಡಲ್ಪಡಕೂಡದು.

13. ಕಂಟ್ರಾಕ್ಟು ಪರತ್ತಿಗೆ ಏನಾದರೂ ವಿರುದ್ಧವಾಗಿ ನಡೆದರೂ ಸರಿಯೆ, ಗುಣದಲ್ಲಿ ಕಡಮೆಯಾಗಿರತಕ್ಕ ಪದಾರ್ಥಗಳನ್ನು ಸರಬರಾಯಿ ಮಾಡಿದರೂ ಸರಿಯೆ, ಜೈಲ್ ಸೂಪರ್ಟಿರ್ಡೆಂಟರವರು ಮುನಾಸಬ್ ಅರಿತು 50 ರೂಪಾಯಿಗೆ ಹೆಚ್ಚದೆ ಜರಿಮಾನೆಯನ್ನು ವಸೂಲ್ ಮಾಡಬಹುದು; ಪದೇಪದೇ ಕರಾರಿಗೆ ತಪ್ಪಿಹೋದರೆ ಕಂಟ್ರಾಕ್ಟನ್ನು ರದ್ದು ಮಾಡಿ ಸೆಕ್ಯೂರಿಟಿಯನ್ನು ಸರಕಾರಕ್ಕೆ ಮುಟ್ಟುಗೋಲಾಗಿ ದೆಗೆದು ಕೊಳ್ಳಬಹುದು.

14. ಕಂಟ್ರಾಕ್ಟು ಕರಾರಿಗೆ ವಿರೋಧವಾಗಿ ನಡೆದ ಸಂದರ್ಭಗಳೆಲ್ಲೆಲ್ಲಾ ಸದರಿ ಸೂಪರ್ಟಿರ್ಡೆಂಟರವರ ಫೈಸಲೇ ಆಖೈರ್ ಫೈಸಲಾಗಿರತಕ್ಕದ್ದು.

15. ಖೈದಿಗಳ ಉಪಯೋಗಕ್ಕೆಂತಲೆ ಅವಶ್ಯವಾದ ತರಕಾರಿಯನ್ನಾಗಲಿ, ಹಾಲನ್ನಾಗಲಿ ಮತ್ತು ಇತರ ತೋಟದ ಫಸಲನ್ನಾಗಲಿ ಕಂಟ್ರಾಕ್ಟು ದರದಂತೆಯೇ ಜೈಲಿನಿಂದ ಖರೀದಿಗೆ ತೆಗೆದು ಕೊಳ್ಳಲು ಕಂಟ್ರಾಕ್ಟುದಾರನು ಬದ್ಧನಾಗಿರತಕ್ಕದ್ದು.

16. ಮತ್ತೆ ಯಾವ ಸಂಗತಿ ಬೇಕಾಗಿದ್ದರೂ ಸೂಪರ್ಟಿರ್ಡೆಂಟರ ಆಫಿಸಿನಲ್ಲಿ ವಿಚಾರಿಸಿ ತಿಳಿದುಕೊಳ್ಳಬಹುದು.

17. ಈ ಕಂಟ್ರಾಕ್ಟುಗಳು ಮೈಸೂರು ಜೈಲ್ ಇನ್ಸ್ಪೆಕ್ಟರ್ ಜನರಲ್ರವರ ಮಂಜೂರಾತಿಗೆ ಬಳಪಟ್ಟು ಇರುವವು. ಇವರು ಎಲ್ಲಾ ದರಖಾಸ್ತುಗಳನ್ನೇ ಆಗಲಿ ಅಥವಾ ಯಾವ ಒಂದು ದರಖಾಸ್ತನ್ನೇ ಆಗಲಿ ತಿರಸ್ಕರಿಸತಕ್ಕ ಹಕ್ಕನ್ನು ಉಳಸಿ ಕೊಂಡಿರುವರು.

18. ಕಂಟ್ರಾಕ್ಟುದಾರರು ಇಜಾರೆಯನ್ನು ತೆಗೆದುಕೊಂಡ ತರುವಾಯ ತಮ್ಮ ಕರಾರಿನಂತೆ ನಡೆಯಲು ಇಷ್ಟ ಪಡದಿದ್ದರೆ, ಕೊನೇ ಪಕ್ಷ ಒಂದು ತಿಂಗಳಿಗೆ ಮುಂಚಿತವಾಗಿಯಾದರೂ ನೋಟಿಸ್ ಕೊಡಬೇಕು, ಮತ್ತು ಅವರ ಸೆಕ್ಯೂರಿಟಿ ಹಣವನ್ನು ಸರಕಾರಕ್ಕೆ ಬಿಟ್ಟುಬಿಡಬೇಕು.

19. ಇಜಾರೆದಾರರು ತಪ್ಪಿ ಹೋಗುವದರಿಂದ ಸರ್ಕಾರಕ್ಕೆ ಆಗುವ ನಷ್ಟವನ್ನು ಅಥವಾ ಕಂಟ್ರಾಕ್ಟಿನಲ್ಲಿ ನಮೂದಾಗುವ ಪದಾರ್ಥಗಳನ್ನು ಸರ್ಕಾರದವರು ಕಂಟ್ರಾಕ್ಟು ದರಕ್ಕಿಂತಲೂ ಹೆಚ್ಚು ದರದ ಮೇರೆ ಬಾಜಾರದಲ್ಲಿ ಕೊಂಡುಕೊಂಡರೆ ಆ ನಷ್ಟವನ್ನೂ ಇಜಾರೆದಾರರು ಸರ್ಕಾರಕ್ಕೆ ಭರ್ತೀ ಮಾಡಿಕೊಡಬೇಕು.

ವಿಚಾರ—ಮೇಲೆ ನಮೂದಾದ ಕಂಟ್ರಾಕುಗಳ ವಿಷಯದಲ್ಲಿ ಯಾವ ವಿಧವಾದ ರಿಯಾಯತಿಯೂ ದೊರೆಯಲಾರದು.

ಯಾವ ಒಬ್ಬನೇ ಒಬ್ಬ ಕಂಟ್ರಾಕ್ಟುದಾರನಾದರೂ ಸರಿಯೇ ಒಟ್ಟು ಇಜಾರೆಗೆ ಜಾಮೀನ್ ತರೀಕ್ 475 ರೂಪಾಯಿಗಳನ್ನು ಜೀವಣಿ ಕಟ್ಟುವದರ ಮೂಲಕ ಬಂದೇ ದರಖಾಸ್ತಿನಲ್ಲಿ ಎಲ್ಲಾ ಪದಾರ್ಥಗಳಿಗೂ ದರಖಾಸ್ತ್ ಕೊಡಬಹುದು.

ಟಿ. ವಿ. ಆರ್ಮುಗಂ,
ಮೈಸೂರ್ ಜೈಲ್ ಸೂಪರ್ಟಿಂಡೆಂಟ್.

ಹಾಸನ ಡಿಸ್ಟ್ರಿಕ್ಟು.

ತಾರೀಖು 26ನೇ ಮೇ 1896.

ಇದರಿಂದ ಸಮಸ್ತ ಜನಗಳಿಗೂ ತಿಳಿಯುವಡಿಸುವದೇನಂದರೆ,—ಸ 1896—97ನೇ ಸಾಲಿಗೆ ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿರುವ ಕುರಂಗದ ಕಲ್ಲು ಜಮಾಯಿಸತಕ್ಕ ಹಕ್ಕನ್ನು ಚನ್ನರಾಯಪಟ್ಟಣ ತಾಲ್ಲೂಕು ಕಚೇರಿಯಲ್ಲಿ ಬರುವ ಜುಲೈ 14ನೇ ತಾರೀಖಿನ ಬೆಳಿಗ್ಗೆ 11 ಘಂಟೆಗೆ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

2. ಅಮಲ್ದಾರ್ರು ಅಥವಾ ಶಿರಸ್ತೇದಾರ್ರು ಹರಾಜು ಮಾಡಿಸುತ್ತಾರೆ.

3. ಚಡಸವಾಲ್ ಅಂಗೀಕರಿಸತಕ್ಕದ್ದು ಹಾಸನ ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನರ್ ಸಾಹೆಬರವರ ಮಂಜೂರಾತಿಗೆ ಬಳಪಟ್ಟಿರುತ್ತೆ.

4. ಹರಾಜು ಕಾಲದಲ್ಲಿ ಸವಾಲ್ ಮಾಡತಕ್ಕವರು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೋ ಅಥವಾ ಏಜಂಟರಾಗಿ ಸವಾಲ್ ಮಾಡುತ್ತಾರೋ ಆ ಸಂಗತಿಯನ್ನ ತಿಳಿಸಬೇಕು. ಏಜಂಟರಾಗಿ ಸವಾಲ್ ಮಾಡುವದಾದರೆ ತಾವು ಯಾರಿಗೋಸ್ಕರ ಸವಾಲ್ ಮಾಡುತ್ತಾರೋ ಅವರಿಂದ ಪಡದಿರುವ ಅಧಿಕಾರ ಪತ್ರಿಕೆಯನ್ನ ಹಾಜರ್ ಮಾಡಬೇಕು. ಹಾಗೆ ಮಾಡಲು ತಪ್ಪಿದರೆ ಅವರ ಸವಾಲ್ ತಿರಸ್ಕರಿಸಲ್ಪಡುತ್ತೆ.

5. ಜಡಸವಾಲ್‌ದಾರ್ರು ಹರಾಜು ಕಾಲದಲ್ಲಿ ತಮ್ಮ ಸವಾಲ್ ಮೊಬಲಗು ಪೈಕಿ ಕೇಕಡಾ 25 ರೂಪಾಯಿ ಮೇರಿಗೆ ಡಿಪಾಜಿಟ್ ಮೊಬಲಗು ಹಾಜರ್ ಮಾಡಬೇಕಲ್ಲದೆ ಹರಾಜ್ ಮುಂಜೂರ್ ಮಾಡಲ್ಪಟ್ಟು ಸಂಗತಿ ಡೆಪ್ಯೂಟಿ ಅಮಲ್‌ದಾರ್ರಿಂದ ಜಡಸವಾಲ್‌ದಾರ್ರಿಗೆ ತಿಳಿಸಲ್ಪಟ್ಟ ತಾರೀಖು ಲಾಗಾಯತ್ತು 7 ದಿವಸಗಳೊಳಗಾಗಿ ಜಡಸವಾಲ್ ಮೊಬಲಗಿನ ಮೇಲೆ ರೂಪಾಯಿ ಒಂದಕ್ಕೆ ಒಂದು ಆಣೆಯಂತೆ ಆಗುವ ಲೋಕಲ್ ಸೆಸ್ಸ್ ದೇಖೀಲ್ ಜಡಸವಾಲ್ ಮೊಬಲಗನ್ನ ಪಾವತಿ ಮಾಡದಿದ್ದರೆ ಹಾಗೆ ಇಟ್ಟ ಡಿಪಾಜಿಟ್ ಮೊಬಲಗು ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು.

6. ಇಜಾರೇದಾರ್ರು ಹಿಡುವಳಿ ಜಮೀರ್ಗಳಲ್ಲಿ ಇರತಕ್ಕ ಕುರಂಗದ ಕಲ್ಲುಗಳನ್ನ ಆಯಾ ಹಿಡುವಳಿದಾರ್ರ ಅನುಮತಿ ವಿನಹ ಆರಿಸಿಕೊಳ್ಳಕೂಡದು. ಮತ್ತು ಹಿಡುವಳಿದಾರ್ರು ತಮ್ಮ ಜಮೀನುಗಳಲ್ಲಿರತಕ್ಕ ಕುರಂಗದ ಕಲ್ಲುಗಳನ್ನ ತಾವೆ ಆರಿಸಿಕೊಳ್ಳಕೂಡದು. ಅಥವಾ ಇಜಾರೆದಾರ್ರು ವಿನಹ ಇತರರಿಗೆ ಮಾರಲೂ ಕೂಡದು.

7. ಇಜಾರೆದಾರ್ರು ಹುಲ್ಲುಬನ್ನಿಯ ಯಾ ಹುಲ್ಲುಗಾವಲ್ ಇಜಾರೆದಾರ್ರ ಹಕ್ಕಿಗೆ ಆತಂಕ ಪಡಿಸಕೂಡದು.

8. ಹಿಡುವಳಿಯಲ್ಲಿ ಕಲ್ಲಿದ ಜಮೀರ್ಗಳನ್ನ ಸರಕಾರದವರು ಸಾಗುವಳಿಗೆ ಕೊಡತಕ್ಕ ವಿಷಯದಲ್ಲಿ ಇಜಾರೆದಾರ್ರ ಅಭ್ಯಂತರವೇನೂ ಇರುವದಿಲ್ಲ. ಪರಂತು ಅಂಥಾ ಜಮೀರ್ಗಳಲ್ಲಿ ಸಿಕ್ಕುವ ಕುರಂಗದ ಕಲ್ಲುಗಳನ್ನ ತೆಗದುಕೊಳ್ಳಲು ಅವರಿಗೆ ಹಕ್ಕು ಇರುತ್ತೆ.

9. ಕಲ್ಲುಗಳನ್ನ ಜಮಾಯಿಸುವದಕ್ಕಾಗಿ ಜಮೀರ್ಗಳನ್ನ ಇಜಾರೆದಾರ್ರು ಅಗಿಯಕೂಡದು. ಬಂದು ವೇಳೆ ಅಗಿದರೂ ಸಾಗುವಳಿಗೆ ಅನುಕೂಲಿಸುವ ಹಾಗೆ ಗುಣಿಗಳನ್ನ ಮುಚ್ಚಿ ಸರಪಡಿಸಬೇಕು.

10. ಕಲ್ಲುಗಳು ಜಮಾಯಿಸಲ್ಪಟ್ಟ ಗ್ರಾಮ, ಒಪ್ಪು ಮಣ ಕಲ್ಲುಗಳು, ಮತ್ತು ಅದು ರಫ್ತಾಗತಕ್ಕ ಸ್ಥಳ ಈ ಪಿಪ್ಪೀಲ್‌ಗಳು ನಮೂದು ಕಂಡು ಸಬ್ ತಾಲ್ಲೂಕು ಡೆಪ್ಯೂಟಿ ಅಮಲ್‌ದಾರ್ರಿಂದ ಬಂದು ಮಾಫೀ ಲೈಸೆನ್ಸನ್ನು ಪಡೆಯದೆ ಕಲ್ಲುಗಳನ್ನ ಇಜಾರೇದಾರ್ರು ಸಾಗಿಸಕೂಡದು.

ಎ. ಕೃಷ್ಣಸ್ವಾಯ್ಯಂಗಾರ್ರು,
ಡೆಪ್ಯೂಟಿ ಕಮ್ಮಿಷನರ್.

ಶಿವಮೊಗ್ಗ ಡಿಸ್ಟ್ರಿಕ್ಟು.
ಇಸ್ತಿಹಾರ್ನಾಮೆ.

ತಾರೀಖು 5ನೇ ಜೂ೯ 1896ನೇ ಇಸವಿ.

ಇದರಿಂದ ಸಕಲ ಜನಗಳಿಗೂ ತಿಳಿಯಪಡಿಸುವದೇನಂದರೆ:—

ಈ ಕೆಳಗೆ ನಮೂದಿಸುವ ಸಂದಲ್ ಕೋಠಿಗಳಿಗೆ ಅವುಗಳ ಬಾಜೂದಲ್ಲಿ ಕಾಣಿಸಿರುವ ತಾಲ್ಲೂಕಿನ ಹೋಬಳಿಗಳಿಂದ ಪಣ ಸಂದಲ್ ಮರಗಳು ಮತ್ತು ಹೊಂಭಿಸಿ ಎಂದು ಕರಿಯಲ್ಪಡುವ ಕ್ಷೀಣ ಹೊಂದುತ್ತಾ ಇರುವ ಬಲಿತ ಸಂದಲ್ ಮರಗಳು, ಮತ್ತು ನೆಲದಲ್ಲಿ ಬಿಟ್ಟು ಇರುವ ಬೇರುಗಳು, ಬೇರು ಸಹಿತ ಕೀಳಿಸಿ ಬೀಳುವ ಮರ ಕಾವುಗಾರಿಯಿಂದ 1896ನೇ ಇಸವಿ ಅಕ್ಟೋಬರು 31ನೇ ತಾರೀಖಿನೊಳಗೆ ಕೋಠಿಗೆ ರವಾನಿಸಿ ಕೊಡುವದಕ್ಕೆ ಕಂಟ್ರಾಕ್ಟು ದರಖಾಸ್ತುಗಳು ಅಂಗೀಕರಿಸಲ್ಪಡುತ್ತೆ.

ನಂಬರು.	ಕೋಠೀಹೆಸರು.	ಜಮಾಯಿಸುವ ಮೊತ್ತ.	ಹೋಬಳಿ ಹೆಸರು.	ತಾಲ್ಲೂಕು ಹೆಸರು.
1	ಶಿವಮೊಗ್ಗ	30 ಟ್ಕ.	ಆಗರದಹಳ್ಳಿ ತರಫ಼ಿ ಹೊಳಲೂರು	ಶಿವಮೊಗ್ಗ
		20 ,,	ಹೊಳೇಹೊನ್ನೂರು	ಡಿಟೋ
		25 ,,	ಚನ್ನಗಿರಿ	ಚನ್ನಗಿರಿ.
		25 ,,	ಭದ್ರಾವತಿ	ಡಿಟೋ
2	ಸಾಗರ	25 ,,	ಅನಂತಪುರ	ಸಾಗರ
3	ತೀರ್ಥಹಳ್ಳಿ	25 ,,	ಆರಗ	ತೀರ್ಥಹಳ್ಳಿ
		25 ,,	ಅಗ್ರಹಾರ	ಡಿಟೋ
		25 ,,	ಹುಮಚ	ನಗರ
		200		

2. ಎಲ್ಲಾ ಟೆಂಡರುಗಳ ಮೇಲೂ ಇಂಥಾ ಸಂದಲ್ ಕೋಠಿಗೆ ಪಣ ಮತ್ತು ಹೊಂಭೀ ಸಂದಲ್ ಜಮಾಯಿಸುವ ಬಗ್ಗೆ ಟೆಂಡರ್ ಎಂದು ಬರಿಯತಕ್ಕದ್ದು. ಮತ್ತು ಟೆಂಡರ್ ಸಂಗಡ ಕೋಠಿ ಒಂದಕ್ಕೆ 50 ರೂಪಾಯಿನಂತೆ ಕರ್ನೆಸೀ ನೋಟು ಮೂಲಕ ಕೇವಣಿ ಹಾಜರ್ಮಾಡತಕ್ಕದ್ದು. ಅಂಗೀಕರಿಸದೇ ಇದ್ದ ಟೆಂಡರಿನ ಸಂಗಡ ಮೊಬಲಗು ವಾಪಸು ಮಾಡಲ್ಪಡುವದು.

3. ಟೆಂಡರುಗಳು ಶಿವಮೊಗ್ಗ ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರ ಹೆಸರಿನಲ್ಲಿ ಬರಿಯತಕ್ಕದ್ದು. 1896ನೇ ಇಸವಿ ಜುಲೈ 15ನೇ ತಾರೀಖು ದಿವಿ 12 ಘಂಟೆವರಿಗೂ ಸದರೀ ಟೆಂಡರುಗಳು ಅಂಗೀಕರಿಸಲ್ಪಡುವವು.